# ಕರ್ನಾಟಕ ಸರ್ಕಾರ

## ಕೋವಿಡ್-19 ಕುರಿತ ಮಧ್ಯಾಹ್ನದ ಪರಿಸ್ಥಿತಿಯ ಮಾಹಿತಿ

**ದಿನಾಂಕ-31-03-2020** **ಪರಿಸ್ಥಿತಿ ಬೆಳಿಗ್ಗೆ-8.00 ವರೆಗೆ**

1) 3 ಮರಣ ಮತ್ತು 6 ಬಿಡುಗಡೆಯನ್ನು ಒಳಗೊಂಡು ಇವತ್ತಿನವರೆಗೂ ಒಟ್ಟಾರೆ 98 ಕೋವಿಡ್–19 ಖಚಿತ ಪ್ರಕರಣಗಳು ಗುರುತಿಸಲಾಗಿದೆ.

- P89: 52 ವರ್ಷದ ಪುರುಷ, ಹೊಸಪೇಟೆ–ಬಳ್ಳಾರಿ ಜಿಲ್ಲೆಯ ನಿವಾಸಿಯಾಗಿದ್ದು, ಇವರು ದಿನಾಂಕ 16.03.2020 ರಂದು ಬೆಂಗಳೂರು ಜಿಲ್ಲೆಗೆ ಪ್ರಯಾಣಿಸಿದ ಪ್ರಯಾಣ ಹಿನ್ನಲೆ ಇರುತ್ತದೆ. ಇವರನ್ನು ಬಳ್ಳಾರಿಯ ನಿಗದಿತ ಆಸ್ಪತ್ರೆಯಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ.

- P90: 48 ವರ್ಷದ ಮಹಿಳೆ, ಹೊಸಪೇಟೆ–ಬಳ್ಳಾರಿ ಜಿಲ್ಲೆಯ ನಿವಾಸಿಯಾಗಿದ್ದು, ಇವರು ದಿನಾಂಕ 16.03.2020 ರಂದು ಬೆಂಗಳೂರು ಜಿಲ್ಲೆಗೆ ಪ್ರಯಾಣಿಸಿದ ಪ್ರಯಾಣ ಹಿನ್ನಲೆ ಇರುತ್ತದೆ. ಇವರನ್ನು ಬಳ್ಳಾರಿಯ ನಿಗದಿತ ಆಸ್ಪತ್ರೆಯಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ.

- P91: 26 ವರ್ಷದ ಮಹಿಳೆ, ಹೊಸಪೇಟೆ–ಬಳ್ಳಾರಿ ಜಿಲ್ಲೆಯ ನಿವಾಸಿಯಾಗಿದ್ದು, ಇವರು ದಿನಾಂಕ 16.03.2020 ರಂದು ಬೆಂಗಳೂರು ಜಿಲ್ಲೆಗೆ ಪ್ರಯಾಣಿಸಿದ ಪ್ರಯಾಣ ಹಿನ್ನಲೆ ಇರುತ್ತದೆ. ಇವರನ್ನು ಬಳ್ಳಾರಿಯ ನಿಗದಿತ ಆಸ್ಪತ್ರೆಯಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ.

- P92: 40 ವರ್ಷದ ಪುರುಷ, ಬೆಂಗಳೂರು ಜಿಲ್ಲೆಯ ನಿವಾಸಿಯಾಗಿದ್ದು (P59 ಸಂಪರ್ಕಿತ). ಇವರನ್ನು ಬೆಂಗಳೂರಿನ ನಿಗದಿತ ಆಸ್ಪತ್ರೆಯಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ.

- P93: 19 ವರ್ಷದ ಪುರುಷ, ಬೆಂಗಳೂರು ಜಿಲ್ಲೆಯ ನಿವಾಸಿಯಾಗಿದ್ದು, ನ್ಯೂಯಾರ್ಕ್, ಯು.ಎಸ್.ಎ. ದಿಂದ ದಿನಾಂಕ 22.03.2020 ರಂದು ಭಾರತಕ್ಕೆ ವಾಪಾಸ್ಸಾಗಿರುವ ಪ್ರಯಾಣ ಹಿನ್ನಲೆ ಇರುತ್ತದೆ. ಇವರನ್ನು ಬೆಂಗಳೂರಿನ ನಿಗದಿತ ಆಸ್ಪತ್ರೆಯಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ.

- P94: 40 ವರ್ಷದ ಮಹಿಳೆ, ಗೌರಿಬಿದನೂರು–ಚಿಕ್ಕಬಳ್ಳಾಪುರ ಜಿಲ್ಲೆಯ ನಿವಾಸಿಯಾಗಿರುತ್ತಾರೆ. ಇವರನ್ನು ಚಿಕ್ಕಬಳ್ಳಾಪುರ ಜಿಲ್ಲೆಯ ನಿಗದಿತ ಆಸ್ಪತ್ರೆಯಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ.

- P95: 35 ವರ್ಷದ ಪುರುಷ, ಮೈಸೂರು ಜಿಲ್ಲೆಯ ನಿವಾಸಿಯಾಗಿರುತ್ತಾರೆ (P52 ಸಂಪರ್ಕಿತ). ಇವರನ್ನು ಮೈಸೂರು ಜಿಲ್ಲೆಯ ನಿಗದಿತ ಆಸ್ಪತ್ರೆಯಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ.

- P96: 41 ವರ್ಷದ ಪುರುಷ, ಮೈಸೂರು ಜಿಲ್ಲೆಯ ನಿವಾಸಿಯಾಗಿರುತ್ತಾರೆ (P52 ಸಂಪರ್ಕಿತ). ಇವರನ್ನು ಮೈಸೂರು ಜಿಲ್ಲೆಯ ನಿಗದಿತ ಆಸ್ಪತ್ರೆಯಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ.

- P97: 34 ವರ್ಷದ ಪುರುಷ, ದಕ್ಷಿಣ ಕನ್ನಡ ಜಿಲ್ಲೆಯ ನಿವಾಸಿಯಾಗಿದ್ದು, ದುಬೈ ದೇಶಕ್ಕೆ ಪ್ರಯಾಣ ಬೆಳಸಿ ದಿನಾಂಕ 18.03.2020 ರಂದು ಭಾರತಕ್ಕೆ ಹಿಂದಿರುಗಿರುವ ಪ್ರಯಾಣ ಹಿನ್ನಲೆ ಇರುತ್ತದೆ. ಇವರನ್ನು ದಕ್ಷಿಣ ಕನ್ನಡ ಜಿಲ್ಲೆಯ ನಿಗದಿತ ಆಸ್ಪತ್ರೆಯಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ.

- P98: 26 ವರ್ಷದ ಪುರುಷ, ಭಟ್ಕಳ–ಉತ್ತರ ಕನ್ನಡ ಜಿಲ್ಲೆಯ ನಿವಾಸಿಯಾಗಿದ್ದು, ದುಬೈ ದೇಶಕ್ಕೆ ಪ್ರಯಾಣ ಬೆಳಸಿ ದಿನಾಂಕ 20.03.2020 ರಂದು ಭಾರತಕ್ಕೆ ಹಿಂದಿರುಗಿರುವ ಪ್ರಯಾಣ ಹಿನ್ನಲೆ ಇರುತ್ತದೆ. ಇವರನ್ನು ಉತ್ತರ ಕನ್ನಡ ಜಿಲ್ಲೆಯ ನಿಗದಿತ ಆಸ್ಪತ್ರೆಯಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ.

2) ಕೋವಿಡ್–19 ಅನ್ನು ತಡೆಗಟ್ಟುವ ಪ್ರಯತ್ನದಡಿ, ಆಯುಕ್ತರು, ಆ.ಕು.ಕ. ಸೇವೆಗಳು ರವರು ರಾಜ್ಯದ ಎಲ್ಲಾ ಖಾಸಗಿ ಆಸ್ಪತ್ರೆಗಳು ತಮ್ಮ ಅಡಿಯಲ್ಲಿ ಕಂಡುಬರುವ ಅತ್ಯಂತ ತೀವ್ರ ಸ್ವರೂಪದ ಉಸಿರಾಟದ ಸಮಸ್ಯೆ (ಎಸ್.ಎ.ಆರ್.ಐ) (Severe Acute Respiratory Illness (SARI)) ಪ್ರಕರಣಗಳನ್ನು ಕಡ್ಡಾಯವಾಗಿ ಜಿಲ್ಲಾ ಕಣ್ಗಾವಲು ಅಧಿಕಾರಿ (District Surveillance Officer) ರವರಲ್ಲಿ ವರದಿ ಮಾಡುವಂತೆ ಆದೇಶಿಸುತ್ತಾರೆ.

3) ಆಯುಕ್ತರು, ಆ.ಕು.ಕ. ಸೇವೆಗಳು ರವರು ಅತ್ಯಂತ ತೀವ್ರ ಸ್ವರೂಪದ ಉಸಿರಾಟದ ಸಮಸ್ಯೆಗೆ (ಎಸ್.ಎ.ಆರ್.ಐ) (Severe Acute Respiratory Illness - SARS-CoV-2) ರೋಗನಿರೋಧಕತೆಗಾಗಿ ಹೈಡ್ರಾಕ್ಸಿ ಕ್ಲೋರೊಕ್ವಿನ್ ಮಾತ್ರೆಗಳ ಪ್ರಾಯೋಗಿಕ ಬಳಕೆಗಾಗಿ ಶಿಫಾರಸ್ಸು ಮಾಡಿರುತ್ತಾರೆ ಮತ್ತು ಆರೋಗ್ಯ ಕಾರ್ಯಕರ್ತರಿಗೆ ಹೈಡ್ರಾಕ್ಸಿ ಕ್ಲೋರೋಕ್ವಿನ್ ಮಾತ್ರೆಗಳನ್ನು ಒದಗಿಸಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳಲು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿರುತ್ತಾರೆ.

4) ಅತ್ಯಂತ ತೀವ್ರ ಸ್ವರೂಪದ ಉಸಿರಾಟದ ಸಮಸ್ಯೆ (ಎಸ್.ಎ.ಆರ್.ಐ) ಗೆ (Severe Acute Respiratory Illness (SARI)) ಸಂಬಂದಿಸಿದ ಎಲ್ಲಾ ಪ್ರಕರಣಗಳನ್ನು ಕ್ಲಿನಿಕಲ್ ನಿರ್ವಹಣೆಗಾಗಿ ಐಸಿಯು ಸೌಲಭ್ಯ ಇರುವ ಜಿಲ್ಲಾ ಮಟ್ಟದ ಆಸ್ಪತ್ರೆಗೆ ಅಥವಾ ವೈದ್ಯಕೀಯ ಕಾಲೇಜುಗಲಿಗೆ ಕಳುಹಿಸಬೇಕು ಎಂದು ಮತ್ತು ಪರಿಷ್ಕೃತ ಮಾದರಿ ಸಂಗ್ರಹದ ಶಿಷ್ಟಾಚಾರದ ಪ್ರಕಾರ ಮಾದರಿಯನ್ನು ಕೋವಿಡ್–19 ಪರೀಕ್ಷೆಗಾಗಿ ಪಡೆಯಲು ಆಯುಕ್ತರು, ಆ.ಕು.ಕ. ಸೇವೆಗಳು ರವರು ಜಿಲ್ಲೆಗಳಿಗೆ ನಿರ್ದೇಶನ ನೀಡಿರುತ್ತಾರೆ.

5) ಮಾನ್ಯ ಮುಖ್ಯ ಮಂತ್ರಿಗಳು ಕೋವಿಡ್–19 ನಿಯಂತ್ರಣಕ್ಕೆ ಸ್ವಇಚ್ಛೆಯಿಂದ ಟೆಲಿಮೆಡಿಸನ್ ಮುಖಾಂತರ ಸೇವೆ ಸಲ್ಲಿಸಲು ಬಯಸುವ ವೈದ್ಯರಿಗೆ ದೂರವಾಣಿ ಸಂಖ್ಯೆ 08047192219 ಗೆ ಮಿಸ್ಡ್ ಕಾಲ್ ನೀಡಲು ಅಥವಾ https://forms.gle/TPbU7eZgazdxG9gS9 ನಲ್ಲಿ ಸೈನ್ ಅಪ್ ಮಾಡಿಕೊಂಡು ಸರ್ಕಾರಕ್ಕೆ ಸಹಾಯ ಮಾಡಲು ಮನವಿ ಮಾಡಿಕೊಂಡಿರುತ್ತಾರೆ.

6) ಕರೋನಾ ನಿಗಾವಣೆ / ಮೊಬೈಲ್ ಅಪ್ಲಿಕೇಷನ್‌ನ್ನು www.karnataka.gov.in. ಈ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಸದರಿ ಅಪ್ಲಿಕೇಷನ್‌ನಲ್ಲಿ ಕೋವಿಡ್–19 ರೋಗಿಯು ಪ್ರಯೋಗಶಾಲ ಫಲಿತಾಂಶಕ್ಕೆ ಮೊದಲು 14 ದಿವಸ ಪ್ರಯಾಣ ಮಾಡಿದ ವಿವಿಧ ಸ್ಥಳ / ಪ್ರದೇಶಗಳ ಮಾಹಿತಿ ನಿಮಗೆ ಲಭ್ಯವಾಗುತ್ತದೆ. ಅದರ ಜೊತೆಗೆ ಫಸ್ಟ್ ರೆಸ್‌ಪಾಂಡರ್ ಹಾಗೂ ಸಹಾಯವಾಣಿಗಳ ಸಂಖ್ಯೆ ನಿಮಗೆ ಲಭ್ಯವಾಗುತ್ತದೆ.

7) ಕೋವಿಡ್–19 ಎಲ್ಲಾ ರೀತಿಯ ಅನುಮಾನಗಳಿಗೆ ಸಹಾಯವಾಣಿ ಸಂಖ್ಯೆ 104 ರನ್ನು ಮತ್ತು ಹೊಸ ಸಂಖ್ಯೆ **9745697456** ರನ್ನು ಸಂಪರ್ಕಿಸಬಹುದಾಗಿದೆ.

**ನಿಮಗೆ ಸಹಾಯ ಮಾಡಲು ನಮಗೆ ನೆರವು ನೀಡಿ. ನಾವೆಲ್ಲರೂ ಒಟ್ಟಾಗಿ ಕೋವಿಡ್–19 ವಿರುದ್ಧ ಹೋರಾಡೋಣ.**
**ಸಹಾಯವಾಣಿ ಸಂಖ್ಯೆ 9745697456, 080–46848600, 080–66692000 & 104**

ಎಲ್ಲ ರೀತಿಯ ಮಾರ್ಗಸೂಚಿಗಳು ಮತ್ತು ಸಲಹೆಗಳು ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಜಾಲತಾಣದಲ್ಲಿ ಲಭ್ಯವಿದೆ: https://karunadu.karnataka.gov.in/hfw/kannada/Pages/covid-19.aspx

********